# ಕರ್ನಾಟಕ ಸರ್ಕಾರದ ನಡವಳಿಗಳು

ಜಿಲ್ಲಾಧಿಕಾರಿಗಳ ಕಛೇರಿ
ದಾವಣಗೆರೆ.

ವಿಷಯ: ರಾಜ್ಯದಲ್ಲಿ ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ 2011ನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಹಾಯವಾಣಿ ಕೇಂದ್ರಗಳನ್ನು ಸ್ಥಾಪಿಸಿದ್ದು, ಇವುಗಳ ಕಾರ್ಯನಿರ್ವಹಣೆಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ :-

1. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 28 ಇಕಾಅ 2012, ದಿನಾಂಕ:28/03/2012.
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 119 ನಾಸೇಖಾ 2012, ದಿನಾಂಕ: 29/11/2012.
3. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 196 ನಾಸೇಖಾ 2012, ದಿನಾಂಕ: 21/3/2013.
4. ದಾವಣಗೆರೆ, ರಾಯಚೂರು, ಹಾಸನ, ಚಾಮರಾಜನಗರ, ಬೆಂಗಳೂರು ನಗರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳ ಜಿಲ್ಲಾಧಿಕಾರಿಯವರ ದಿನಾಂಕ: 12.04.2013, 22.04.2013, 24.04.2013 ಹಾಗೂ 25.04.2013ರ ಪತ್ರಗಳು.

## ಪ್ರಸ್ತಾವನೆ :

ಮೇಲೆ ಓದಲಾದ (1) ರ ಅಧಿಸೂಚನೆಯಲ್ಲಿ ರಾಜ್ಯ ಸರ್ಕಾರವು 11 ಇಲಾಖೆಗಳ ಮುಖಾಂತರ 151 ಕಾಲಮಿತಿ ಸೇವೆಗಳನ್ನು ಕರ್ನಾಟಕ ನಾಗರೀಕರಿಗೆ ಒದಗಿಸಲು ಕರ್ನಾಟಕ ನಾಗರೀಕರಿಗೆ ಸೇವೆಗಳ ಖಾತರಿ ಅಧಿನಿಯಮ 2011 ಅನ್ನು ದಿನಾಂಕ:02/04/2012 ರಿಂದ ರಾಜ್ಯಾದ್ಯಂತ ಅನುಷ್ಠಾನಗೊಳಿಸಲಾಗಿದೆ.

ಮೇಲೆ ಓದಲಾದ(2) ರ ಅಧಿಸೂಚನೆಯಲ್ಲಿ "ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011" ರ ಸಂಬಂಧ ಸರ್ಕಾರದ ಕ್ರಮಾಂಕ: ಸಿಆಸುಇ 119 ನಾಸೇಖಾ 2012, ದಿನಾಂಕ: 26/10/2012 ರ ಅಧಿಸೂಚನೆ-1 ರ ತಿದ್ದುಪಡಿ ಅಧಿಸೂಚನೆಯಲ್ಲಿ ಸೇರಿಸಿರುವ ಹೆಚ್ಚುವರಿ ಸೇವೆಗಳಲ್ಲಿ 12 ಇಲಾಖೆಗಳ 93 ಹೆಚ್ಚುವರಿ ಸೇವೆಗಳನ್ನು ಹಾಗೂ ಸಿಬ್ಬಂದಿ ಕಲ್ಯಾಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ 21 ಸೇವೆಗಳನ್ನು ದಿನಾಂಕ: 3ನೇ ಡಿಸೆಂಬರ್ 2012 ರಿಂದ ರಾಜ್ಯದಾದ್ಯಂತ ಜಾರಿಗೆ ಬರುವಂತೆ ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಮೇಲೆ ಓದಲಾದ (3) ರ ಸರ್ಕಾರದ ಆದೇಶದಲ್ಲಿ 176 ತಾಲ್ಲೂಕು ಮತ್ತು 30 ಜಿಲ್ಲಾ ಕೇಂದ್ರಗಳಲ್ಲಿ ಸಹಾಯವಾಣಿ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಅವುಗಳಲ್ಲಿ ಸ್ಥಾಪಿಸಲಾದ ದಿನಾಂಕ ಹಾಗೂ ತಿಂಗಳಗನುಸಾರ 15 ಜಿಲ್ಲೆಗಳಿಗೆ ಸಹಾಯವಾಣಿ ಕೇಂದ್ರಗಳ ನಿರ್ವಹಣೆಗೆ, ಸಕಾಲ ಮಂಡಳಿಯಿಂದ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ (4) ರಲ್ಲಿ ದಾವಣಗೆರೆ, ರಾಯಚೂರು, ಹಾಸನ, ಚಾಮರಾಜನಗರ, ಬೆಂಗಳೂರು ನಗರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳ ಜಿಲ್ಲಾಧಿಕಾರಿಯವರ ಪತ್ರಗಳಲ್ಲಿ ಕೆಲವು ಜಿಲ್ಲೆಗಳಲ್ಲಿ ಆರ್ಥಿಕ ವರ್ಷ ಕೊನೆಗೊಂಡಿದ್ದು, ಮಾರ್ಚ್ ಅಂತ್ಯಕ್ಕೆ ಬಿಲ್ಲುಗಳನ್ನು ರಾಜ್ಯ ಹುಜೂರ್‌ಗೆ ಸಲ್ಲಿಸಿದಾಗ ಅನುದಾನವು ವಾಪಸ್ ಆಗಿರುವುದರಿಂದ ಅನುದಾನ ಲಭ್ಯವಿರುವುದಿಲ್ಲವೆಂದು ಹಿಂದಿರುಗಿಸಿರುವುದಾಗಿ ತಿಳಿಸಿರುತ್ತಾರೆ. ಆದ್ದರಿಂದ 2013-14ನೇ ಸಾಲಿನ ಆರ್ಥಿಕ ವರ್ಷದಲ್ಲಿ ಅನುದಾನವನ್ನು ಈ ಕೆಳಕಂಡಂತೆ ಬಿಡುಗಡೆ ಮಾಡಲು ಕೋರಿರುತ್ತಾರೆ.

| ಕ್ರ.ಸಂ | ಜಿಲ್ಲೆಯ ಹೆಸರು | ಸಹಾಯವಾಣಿ ಕೇಂದ್ರಗಳ ಸಂಖ್ಯೆ | ಪ್ರಸ್ತಾವನೆಯ ದಿನಾಂಕ | ಕೋರಿಕೆಯ ಮೊತ್ತ | ಬಿಡುಗಡೆ ಮಾಡಬೇಕಾದ ಮೊತ್ತ |
|---|---|---|---|---|---|
| 1. | ದಾವಣಗೆರೆ | 1+6 | 12.04.2013 | ರೂ.2,81,932/- | ರೂ.2,81,932/- |
| 2. | ರಾಯಚೂರು | 1+5 | 22.04.2013 | ರೂ.2,57,926/ | ರೂ.2,57,926/ |
| 3. | ಹಾಸನ | 1+8 | 24.04.2013 | ರೂ.60,000/- | ರೂ.60,000/- |
| 4. | ಚಾಮರಾಜನಗರ | 1+4 | 22.04.2013 | ರೂ.50,000/- | ರೂ.50,000 |
| 5. | ಬೆಂಗಳೂರು ನಗರ | 1+5 | 24.04.2013 | ರೂ.60,000/- | ರೂ.60,000/- |
| 6. | ಚಿಕ್ಕಬಳ್ಳಾಪುರ | 1+6 | 25.04.2013 | ರೂ.57,400/- | ರೂ.57,400 |
| | ಒಟ್ಟು | 6+34 | | ರೂ.7,67,258/ | ರೂ.7,67,258/- |

ಪಟ್ಟಿಯಲ್ಲಿ ವಿವರಿಸಿರುವಂತೆ, ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ, ಈ ಕೆಳಕಂಡ ಆದೇಶ.

<u>ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 196 ನಾಸೇಖಾ 2012,</u>

<u>ಬೆಂಗಳೂರು, ದಿನಾಂಕ: 03ನೇ ಮೇ 2013.</u>

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

| ಕ್ರ.ಸಂ | ಜಿಲ್ಲೆಯ ಹೆಸರು | ಸಹಾಯವಾಣಿ ಕೇಂದ್ರಗಳ ಸಂಖ್ಯೆ | ಪ್ರಸ್ತಾವನೆಯ ದಿನಾಂಕ | ಕೋರಿಕೆಯ ಮೊತ್ತ | ಬಿಡುಗಡೆ ಮಾಡಿರುವ ಮೊತ್ತ |
|---|---|---|---|---|---|
| 1. | ದಾವಣಗೆರೆ | 1+6 | 12.04.2013 | ರೂ.2,81,932/- | ರೂ.2,81,932/- |
| 2. | ರಾಯಚೂರು | 1+5 | 22.04.2013 | ರೂ.2,57,926/- | ರೂ.2,57,926/- |
| 3. | ಹಾಸನ | 1+8 | 24.04.2013 | ರೂ.60,000/- | ರೂ.60,000/- |
| 4. | ಚಾಮರಾಜನಗರ | 1+4 | 22.04.2013 | ರೂ.50,000/- | ರೂ.50,000/- |
| 5. | ಬೆಂಗಳೂರು ನಗರ | 1+5 | 24.04.2013 | ರೂ.60,000/- | ರೂ.60,000/- |
| 6. | ಚಿಕ್ಕಬಳ್ಳಾಪುರ | 1+6 | 25.04.2013 | ರೂ.57,400/- | ರೂ.57,400/- |
| | ಒಟ್ಟು | 6+34 | | ರೂ.7,67,258/- | ರೂ.7,67,258/- |

ಸದರಿ ಆದೇಶವನ್ನು 2013-14 ನೇ ಸಾಲಿನ ಲೆಕ್ಕ ಶೀರ್ಷಿಕೆ 2052-00-090-0-26-051 (ಯೋಜನೇತರ) ಅಡಿಯಲ್ಲಿ ಒದಗಿಸಲಾಗಿರುವ ರೂ.15.00 ಕೋಟಿಗಳ ವೆಚ್ಚದಲ್ಲಿ ಭರಿಸತಕ್ಕದ್ದು ಮತ್ತು ಸಂಬಂಧಿಸಿದ ಇಲಾಖೆಯ ಅಧಿಕಾರಿಗೆ ಹಣ ಸೆಳೆಯುವ ಅಧಿಕಾರ ನೀಡಲಾಗಿದೆ.

ಸದರಿ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಆಇ 04 ಟಿಎಫ್‌ಪಿ 2012, ದಿನಾಂಕ:27/04/2012ರಲ್ಲಿ ಪ್ರಧಾನ ಕಾರ್ಯದರ್ಶಿಗಳು ಹಾಗೂ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಸಿ.ಎ. ಗಾಯತ್ರಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಆಡಳಿತ ಸುಧಾರಣೆ)
(ನಾಗರೀಕ ಸೇವೆಗಳು ಮತ್ತು ರಾಜಕೀಯ ವಿಶ್ರಾಂತಿ ವೇತನ-2)

ಇವರಿಗೆ :

1. ಕರ್ನಾಟಕ ಮಹಾಲೇಖಪಾಲರು, (ಲೆಕ್ಕಪತ್ರ)/(ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಬಿ ಅಂಡ್ ಆರ್), ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ) ಹಾಗೂ ಮಿಷನ್ ನಿರ್ದೇಶಕರು, ಸಕಾಲ ಮಂಡಳಿ, ಬಹುಮಹಡಿ ಕಟ್ಟಡ, ಬೆಂಗಳೂರು.
5. ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ/ರಾಯಚೂರು ಜಿಲ್ಲೆ/ಹಾಸನ ಜಿಲ್ಲೆ/ಚಾಮರಾಜನಗರ ಜಿಲ್ಲೆ/ಬೆಂಗಳೂರು ನಗರ ಜಿಲ್ಲೆ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆ/ಎಲ್ಲಾ ಜಿಲ್ಲೆಯ ಖಜಾನಾಧಿಕಾರಿಗಳು
6. ಜಿಲ್ಲಾ ಖಜಾನಾಧಿಕಾರಿಗಳು, ದಾವಣಗೆರೆ ಜಿಲ್ಲೆ/ರಾಯಚೂರು ಜಿಲ್ಲೆ/ಹಾಸನ ಜಿಲ್ಲೆ/ಚಾಮರಾಜನಗರ ಜಿಲ್ಲೆ/ಬೆಂಗಳೂರು ನಗರ ಜಿಲ್ಲೆ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆ
7. ನಿರ್ದೇಶಕರು, ಖಜಾನೆ ಇಲಾಖೆ, ಪೋಡಿಯಂ ಬ್ಲಾಕ್, ಡಾ: ಅಂಬೇಡ್ಕರ್ ವೀದಿ, ಬೆಂಗಳೂರು.
8. ನಿರ್ದೇಶಕರು, ಜಿಲ್ಲಾ ಖಜಾನೆ, ಬೆಂಗಳೂರು.
9. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
10. ಉಪ ನಿರ್ದೇಶಕರು, ಟಿ.ಎನ್.ಎಂ.ಸಿ. ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು
11. ಅಪರ ಮಿಷನ್ ನಿರ್ದೇಶಕರು, ಸಕಾಲ ಮಂಡಳಿ, ಸಿಆಸುಇ (ಆಸು), ಬಹುಮಹಡಿ ಕಟ್ಟಡ, ಬೆಂಗಳೂರು.
12. ಆಡಳಿತಾಧಿಕಾರಿ, ಸಕಾಲ ಮಂಡಳಿ, ಸಿಆಸುಇ (ಆಸು), ಬೆಂಗಳೂರು.
13. ಸರ್ಕಾರದ ಜಂಟಿ ಕಾರ್ಯದರ್ಶಿ, ಸಿಆಸುಇ (ಆಸು) ರವರ ಆಪ್ತ ಸಹಾಯಕರು
14. ಹೆಚ್ಚುವರಿ ಪ್ರತಿಗಳು/ಶಾಖಾ ರಕ್ಷಾ ಕಡತ.